# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ವಿಶ್ವಾವಸು ನಾಮ ಸಂವತ್ಸರ

ಪುಟ : ೪ ಸಂಪುಟ : ೭೧ ಸಂಚಿಕೆ : ೧೧

**15-11-2025 ಕಾರ್ತಿಕ ಮಾಸ : ಕೃಷ್ಣ ಪಕ್ಷ ಶನಿವಾರ**

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಶ್ರೀಕ್ಷೇತ್ರ ಹೊಂಬುಜ

### ಶುಭಾಶೀರ್ವಚನ

## "ಧ್ಯಾನದಿಂದ ಸಿದ್ಧಿ"

ಆಧುನಿಕ ಜೀವನದಲ್ಲಿ ಮನಸ್ಸಿನ ಒತ್ತಡ, ಗಾಬರಿ, ಅಶಾಂತಿಗೆ ಧ್ಯಾನವು ಎಲ್ಲರಿಗೂ ಪರಿಹಾರ ನೀಡುತ್ತದೆ ಎಂದು ಎಲ್ಲರೂ ಕೇಳುತ್ತೇವೆ. ಆದರೆ ಧ್ಯಾನದಲ್ಲಿ ಏನು ಯೋಚಿಸಬೇಕು? ಯೋಚನೆಗಳನ್ನು ಹೇಗೆ ನಿಯಂತ್ರಿಸಬೇಕು? ಈ ಪ್ರಶ್ನೆಗಳಿಗೆ ಉತ್ತರ ಮಾತ್ರ ಗೊಂದಲವಾಗಿರುತ್ತದೆ. ಯಾವುದೇ ಸ್ಪಷ್ಟತೆ ಇಲ್ಲದೆ ಧ್ಯಾನ ವಿಧಿಯು ಪರಿಪೂರ್ಣವಾಗದು.

ಧ್ಯಾನ ಕಲಿಯುವ ಆಸೆಯಿಂದ ಒಬ್ಬ ಯುವಕ ಯೋಗಿಯ ಬಳಿಗೆ ಬಂದನು. ಅವನು ಗೌರವದಿಂದ ಕೇಳಿದ "ಗುರುವೇ, ನನಗೆ ಧ್ಯಾನ ಕಲಿಸಿ". ಯೋಗಿ ಕೆಲವು ಕ್ಷಣ ಅವನತ್ತ ನೋಡಿದರು ಮತ್ತು ಪ್ರಶ್ನಿಸಿದರು ನಿನಗೆ ಯಾವ ಪ್ರಾಣಿ ಅತ್ಯಂತ ಇಷ್ಟ. ಅದಕ್ಕೆ ಯುವಕ ಉತ್ತರಿಸಿದ ನನಗೆ ಹಸು ಮತ್ತು ಕೋತಿ ಇಷ್ಟ ಎಂದನು. ಯೋಗಿ ನಗುತಾ ಒಂದನ್ನು ಮಾತ್ರ ಆಯ್ಕೆಮಾಡು ಎಂದನು. ಯುವಕ ಗೊಂದಲದಿಂದ ಒಮ್ಮೆ ಹಸು, ಮತ್ತೊಮ್ಮೆ ಕೋತಿ ಎಂದನು. ಮನಸ್ಸು ಒಂದು ಕಡೆ ಸೇರಲಿಲ್ಲ. ಇದನ್ನು ನೋಡಿದ ಯೋಗಿ ಹೇಳಿದರು ನೀನು ಹಸುವಿನ ಧ್ಯಾನ ಮಾಡು. ಕೋತಿಯನ್ನು ಯೋಚಿಸಬೇಡ.

WWW.HOMBUJAPADMAVATI.ORG

ಯುವಕ ಮನೆಗೆ ಹಿಂತಿರುಗಿ ಧ್ಯಾನ ಆರಂಭಿಸಿದ. ಆದರೆ ವಿಚಿತ್ರ ಅವನು ಕೋತಿಯನ್ನು ಯೋಚಿಸಬಾರದು ಎಂದಷ್ಟೂ ಕೋತಿಯೇ ಮನಸ್ಸಿನ ಮೊದಲ ಅತಿಥಿಯಾಗಿತ್ತು. ಹಸು ಧ್ಯಾನದಲ್ಲಿ ಕಾಣಿಸಲಿಲ್ಲ. ಕೆಲ ದಿನಗಳ ನಂತರ ಯುವಕ ಯೋಗಿಯ ಬಳಿಗೆ ಹಿಂತಿರುಗಿದ ಗುರುವೇ, ನನ್ನ ಮನಸ್ಸಿನಲ್ಲಿ ಕೇವಲ ಕೋತಿಯೇ ಕಾಣುತ್ತದೆ. ಹಸು ಕಾಣುತ್ತಿಲ್ಲ ಎಂದನು. ಅದಕ್ಕೆ ಯೋಗಿ ಉದ್ಗಾರಿಸಿದರು. ನೀನು ನಕಾರಾತ್ಮಕ ಭಾಗ ಕೋತಿಯನ್ನು ಯೋಚಿಸಬೇಡ, ಅದನ್ನೇ ಜೋರಾಗಿ ಹಿಡಿದಿದ್ದಿ. ಧನಾತ್ಮಕ ಭಾಗ ಹಸುವನ್ನು ಯೋಚಿಸು ಅದನ್ನು ಹಿಡಿದುಕೊಳ್ಳಲಿಲ್ಲ. ಮನಸ್ಸು ಯಾವ ಮಾತಿಗೆ ಹೆಚ್ಚು ಒತ್ತು ಕೊಡುತ್ತೇವೆಯೋ ಅದೇ ವೃದ್ಧಿಯಾಗುತ್ತದೆ.

ಮನೋವಿಜ್ಞಾನದ ದೃಷ್ಟಿಯಿಂದ ಈ ಕಥೆ ಕೇವಲ ಧ್ಯಾನದ ಪಾಠವಲ್ಲ. ಇದು ಮನುಷ್ಯನ ಚಿಂತನೆಗಳ ಮೂಲಭೂತ ಗುಣಧರ್ಮವನ್ನೇ ಹೇಳುತ್ತದೆ. ಮನಸ್ಸು ಮಾಡಬೇಡ, ಯೋಚಿಸಬೇಡ, ನಿಲ್ಲಿಸು ಎನ್ನುವ ಪದಗಳನ್ನು ಹಿಡಿಯುವುದಿಲ್ಲ. ಅದು ನೇರ ವಿಷಯ, ಚಿತ್ರ, ವಸ್ತು ಭಾವನೆಗಳನ್ನು ಮಾತ್ರ ಹಿಡಿದುಕೊಳ್ಳುತ್ತದೆ. ನೀವು ಕೋತಿ ಯೋಚಿಸಬೇಡ ಎಂದರೆ ಮನಸ್ಸಿಗೆ ಬಂದ ಚಿತ್ರವೇ ಕೋತಿ.

ಆದ್ದರಿಂದ ಈ ಕಥೆ ಧ್ಯಾನದ ಮೂಲ ಸತ್ಯವನ್ನು ಹೇಳುತ್ತದೆ. ಧ್ಯಾನದ ಸೂತ್ರ ಧನಾತ್ಮಕದ ಮೇಲೆ ಒತ್ತು ನೀಡುವುದು. ಏನು ಬಿಡಬೇಕು ಎನ್ನುವುದಕ್ಕಿಂತ ಏನು ಹಿಡಿದುಕೊಳ್ಳಬೇಕು (ಕೇಂದ್ರೀಕರಿಸುವುದು) ಎಂಬುದರ ಮೇಲೆ ಗಮನ ಕೊಟ್ಟಾಗ ಮಾತ್ರ ಮನಸ್ಸು ನಿಯಂತ್ರಿತವಾಗುತ್ತದೆ.

ನಾವು ಧ್ಯಾನದಲ್ಲಾಗಲಿ, ಜೀವನದಲ್ಲಾಗಲಿ, ನಕಾರಾತ್ಮಕ ಸೂಚನೆಗೆ ಬಲ ಕೊಟ್ಟರೆ ಅದೇ ಹೆಚ್ಚಾಗುತ್ತದೆ. ಧನಾತ್ಮಕ ಗುರಿ, ಧನಾತ್ಮಕ ವಸ್ತು, ಧನಾತ್ಮಕ ಅಭ್ಯಾಸ ಇವೆ ಮನಸ್ಸನ್ನು ಸುಲಭವಾಗಿ ಪ್ರೇರೇಪಿಸುತ್ತವೆ.

ಹಸು ಮತ್ತು ಕೋತಿಯ ಈ ಕಥೆ ಧ್ಯಾನ, ಚಿಂತನೆ ಮತ್ತು ಮಾನಸಿಕ ಆರೋಗ್ಯವನ್ನು ಅರ್ಥಮಾಡಿಕೊಳ್ಳುವ ಅತ್ಯಂತ ಸರಳ ಉದಾಹರಣೆಯಾಗಿದೆ. ಮನಸ್ಸು ನಿಷೇಧಕ್ಕೆ ಅಲ್ಲ, ದಿಕ್ಕು ಸೂಚನೆಗೆ ಪ್ರತಿಕ್ರಿಯಿಸುತ್ತದೆ. ನಮ್ಮ ಯೋಚನೆಗಳು ನಮ್ಮ ಬದುಕನ್ನು ನಡೆಸುತ್ತವೆ. ಆದ್ದರಿಂದ ಎಚ್ಚರಿಕೆ, ಸ್ಪಷ್ಟತೆ ಮತ್ತು ಧನಾತ್ಮಕತೆ ಜೀವನದ ಮಾರ್ಗದರ್ಶಕವಾಗಲಿ.

### ಶ್ರೀಕ್ಷೇತ್ರ ಹೊಂಬುಜದಲ್ಲಿ ಲಕ್ಷದೀಪೋತ್ಸವ

## "ಸರ್ವರ ಬಾಳಿನಲ್ಲಿ ನಿರಂತರ ಬೆಳಕು ಜೀವನದಲ್ಲಿ ಯಶಸ್ಸು ಕಾಣುವಂತಾಗಲಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ನ.09) :** ಜೀವನದಲ್ಲಿ ಕಷ್ಟ-ನಷ್ಟ-ದುಃಖ ಹಾಸುಕೊಕ್ಕಾಗಿ ಬಂದರೂ ಧರ್ಮಪ್ರಜ್ಞೆಯಿಂದ ಕರ್ತವ್ಯ ನಿರ್ವಹಣೆ, ಸಾಧನೆಯ ಗುರಿ ತಲುಪಲು ಸಾಧ್ಯವಿದೆ. ದೀಪಾವಳಿಯ ಸಂದೇಶದಂತೆ ಕಾರ್ತೀಕ ಮಾಸದಲ್ಲಿ ನೆರವೇರುವ ದೀಪೋತ್ಸವವು "ದೀಪಾರಾಧನೆ" ಆಗಿದೆ ಎಂದು ಹೊಂಬುಜ ಅತಿಶಯ ಶ್ರೀಕ್ಷೇತ್ರದ ಜೈನ ಶ್ರೀಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಶ್ರೀ ಪಾರ್ಶ್ವನಾಥ ತೀರ್ಥಂಕರ, ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಜರುಗಿದ ಪರಂಪರಾನುಗತ ದೀಪೋತ್ಸವದಂದು ತಿಳಿಸಿದರು. **ಸರ್ವರ ಬಾಳಿನಲ್ಲಿ ನಿರಂತರ ಬೆಳಕು ಧರ್ಮಾನುರಾಗಿಯಾಗಿ ಜೀವನದಲ್ಲಿ ಯಶಸ್ಸು ಕಾಣುವಂತಾಗಲಿ** ಎಂದು ಪ್ರವಚನದಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ವಾತ್ಸಲ್ಯಮೂರ್ತಿ ಶ್ರೀ 108 ಗುಣನಂದಿ ಮಹಾರಾಜರ ಶಿಷ್ಯ, ಆಚಾರ್ಯ ಶ್ರೀ 108 ಗುಣಭದ್ರನಂದಿ ಮಹಾರಾಜರ ಸಸಂಘಸ್ಥರಾಗಿ ಆರ್ಯಿಕಾ ಮಾತಾಜಿಯವರು ಉಪಸ್ಥಿತರಿದ್ದರು.

ಊರ-ಪರವೂರ ಭಕ್ತರು, ಹುಂಚ ಜೈನ ಸಮಾಜ, ಶ್ರೀ ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು ಜಿನಮಂದಿರ, ಮಾನಸ್ತಂಭ, ಚಂದ್ರಶಾಲೆ, ಶ್ರೀಮಠದ ಆವರಣದಲ್ಲಿ ದೀಪ ಪ್ರಜ್ವಲನ ಮಾಡಿದರು. ವಾದ್ಯಗೋಷ್ಠಿಯೊಂದಿಗೆ ಆಗಮೋಕ್ತ ಪೂಜಾ ವಿಧಾನಗಳು ಸಾಂಗವಾಗಿ ನೆರವೇರಿದ್ದು ರಾತ್ರಿ ನಗರದಲ್ಲಿ ಉತ್ಸವ ಮೂರ್ತಿಯೊಂದಿಗೆ ಸಾಲಾಂಕೃತ ಶೋಭಾಯಾತ್ರೆ ನಡೆಯಿತು. ಬೆಳಕಿನ ಚಿತ್ತಾರದಿಂದ ಶ್ರೀಕ್ಷೇತ್ರವು ಶೋಭಿಸುವಂತಾಯಿತು.

ಗಜರಾಣಿ ಐಶ್ವರ್ಯ, ಆಶ್ವ ಮಾನವಿ, ಶೋಭಾಯಾತ್ರೆಗೆ ಮೆರಗು ನೀಡಿದವು.

### ಪರಮಪೂಜ್ಯ ಶ್ರೀಗಳವರ ಪಟ್ಟಾಭಿಷೇಕ ವರ್ಧಂತ್ಯೋತ್ಸವ

## "ಸುಸಂಸ್ಕೃತ ಜೀವನವು ಧರ್ಮಮಾರ್ಗದಲ್ಲಿರಲಿ, ಸಂಘರ್ಷರಹಿತ 'ವಿಶ್ವಶಾಂತಿ' ನೆಲೆಗೊಳ್ಳಲಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



ಹೊಂಬುಜ (ನ.10): "ಧರ್ಮಪಥದ ಜೀವನವು ಸಮ್ಯಕ್ತ್ವ ಗುಣಗಳಿಂದ ಶ್ರೇಷ್ಠವೆನಿಸುವುದು. ಪ್ರಾಚೀನ ಅತಿಶಯ ಶ್ರೀಕ್ಷೇತ್ರ ಹೊಂಬುಜದ ಶ್ರೀ 1008 ಪಾರ್ಶ್ವನಾಥ ತೀರ್ಥಂಕರರ, ವಿಶ್ವವಂದನೀಯ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯು 1400 ವರ್ಷಗಳಿಂದ ಭಕ್ತರ ಶ್ರದ್ಧಾಭಕ್ತಿಯ ಪುಣ್ಯಕ್ಷೇತ್ರವಾಗಿದೆ. ತೀರ್ಥಂಕರರ ಉಪದೇಶಗಳು ಮತ್ತು ಮಹಾಮಾತೆ ಶ್ರೀ ಪದ್ಮಾವತಿ ದೇವಿ ಕೃಪಾಶೀರ್ವಾದವು ಭಕ್ತರನ್ನು ಸದಾ ಹರಸುತ್ತಿರುವುದು" ಎಂದು ಹೊಂಬುಜ ಶ್ರೀ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ಪ್ರವಚನದಲ್ಲಿ ವಿವಿಧ ಜೈನಾಚಾರ್ಯರುಗಳ ಕುರಿತು ಉಲ್ಲೇಖಿಸಿ ತಿಳಿಸಿದರು. 2ನೇ ಪುಟಕ್ಕೆ

## ಹೊಂಬುಜದಲ್ಲಿ ಭಗವಾನ ಶ್ರೀ ಮಹಾವೀರ ತೀರ್ಥಂಕರರ ನಿರ್ವಾಣ ಕಲ್ಯಾಣ

# "ಶ್ರೀ ಮಹಾವೀರ ತೀರ್ಥಂಕರರ ಉಪದೇಶ ಎಲ್ಲರಿಗೂ ಪ್ರೇರಣೆ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಅ.21) :** **"ಜೈನ ಧರ್ಮದ ಇಪ್ಪತ್ತನಾಲ್ಕನೇಯ ತೀರ್ಥಂಕರರಾದ ಶ್ರೀ ಮಹಾವೀರ ಸ್ವಾಮಿಯವರ ಅಹಿಂಸಾ ಧರ್ಮದ ಸೂತ್ರಗಳು ಹಾಗೂ ಪರಸ್ಪರ ವಾತ್ಸಲ್ಯಮಯ ಜೀವನದ ಸಾತ್ವಿಕ ದಿನಚರಿಯ ಉಪದೇಶಗಳು ಮಾನವ ಕಲ್ಯಾಣಾಭ್ಯುದಯಕ್ಕೆ ಪ್ರೇರಣೆ ನೀಡಿವೆ"** ಎಂದು ಹೊಂಬುಜ ಶ್ರೀಕ್ಷೇತ್ರದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ತಿಳಿಸಿದರು.

ಹೊಂಬುಜದ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಲೋಕಮಾತೆ ಯಕ್ಷಿಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಶ್ರೀ ಮಹಾವೀರ ತೀರ್ಥಂಕರರ 2552ನೇ ನಿರ್ವಾಣ ಮೋಕ್ಷಕಲ್ಯಾಣ ಸುದಿನ ಪರ್ವದ ನಿಮಿತ್ತ ವಿಶೇಷ ಪೂಜಾ ವಿಧಿ-ವಿಧಾನವನ್ನು ನೆರವೇರಿಸಿ ಪ್ರವಚನದಲ್ಲಿ **"ಪ್ರತಿಯೊರ್ವರೂ ಸತ್ಯ-ಅಹಿಂಸೆ-ಅಪರಿಗ್ರಹ-ಅಚೌರ್ಯ-ಬ್ರಹಚರ್ಯ ನಿಯಮಗಳನ್ನು ಪರಿಪಾಲಿಸುವಂತಾಗಬೇಕು. ಸಂಘರ್ಷರಹಿತ ಸಮಾಜ ನಿರ್ಮಾಣದಲ್ಲಿ ಜೈನ ಧರ್ಮದ ಕೊಡುಗೆಯನ್ನು ಅನುಷ್ಠಾನಗೊಳಿಸಬೇಕು"** ಎಂದು ವಿವರಿಸಿದರು.

ಆಗಮೋಕ್ತ ವಿಧಿ-ವಿಧಾನದಲ್ಲಿ ಭಗವಾನ ಶ್ರೀ ಮಹಾವೀರ ಸ್ವಾಮಿ ಜಿನಬಿಂಬದ ಉತ್ಸವ, ಅಷ್ಟವಿಧಾರ್ಚನೆ ಪೂಜೆ, ನಿರ್ವಾಣ ಲಾಡು ಸಮರ್ಪಿಸಲಾಯಿತು. ಊರ ಪರವೂರ ಭಕ್ತರು, ಶ್ರೀ ಪದ್ಮಾವತಿ ಮಹಿಳಾ ಸಮಾಜದ ಶ್ರಾವಿಕೆಯರು, ಶ್ರೀ ಕುಂದಕುಂದ ಗುರುಕುಲ ವಿದ್ಯಾಪೀಠದ ವಿದ್ಯಾರ್ಥಿಗಳು ಶ್ರೀ ಮಹಾವೀರ ಸ್ವಾಮಿ ಸ್ತೋತ್ರ ಪಠಿಸಿದರು. ಶ್ರೀಗಳವರು ಮಂತ್ರಾಕ್ಷತೆ ನೀಡಿ ಹರಸಿದರು.

## ಶ್ರೀಕ್ಷೇತ್ರ ಹೊಂಬುಜದಲ್ಲಿ ಗೋಪೂಜೆ

# "ದೀಪಾವಳಿ ಪಾಡ್ಯದಂದು ಪೂಜಿಸುವ ಗೋಮಾತೆ ಕಾಮಧೇನು"

WWW.HOMBUJAPADMAVATI.ORG

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಅ.22) :** "ಹಾಲನ್ನು ನಿಸ್ವಾರ್ಥವಾಗಿ ನೀಡುತ್ತಿರುವ ಗೋವುಗಳು **ಜನಸಮುದಾಯವನ್ನು ಪೋಷಣೆ ಮಾಡುವ ಮಾತೆ. ದೀಪಾವಳಿಯ ಪಾಡ್ಯ ಸುದಿನದಂದು ಗೋಪೂಜೆ ಸಂಸ್ಕಾರವು ಭಾರತೀಯ ಧರ್ಮಪರಂಪರೆಯ ಮಹತ್ವವನ್ನು ಸಾರುತ್ತವೆ"** ಎಂದು ಹೊಂಬುಜ ಅತಿಶಯ ಶ್ರೀಕ್ಷೇತ್ರದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಶ್ರೀಕ್ಷೇತ್ರದ ಗೋಶಾಲೆಯಲ್ಲಿ ಗೋವುಗಳಿಗೆ ಪೂಜಾ ವಿಧಿ-ವಿಧಾನ ಸಮರ್ಪಿಸಿ, ಪ್ರವಚನದಲ್ಲಿ **"ಕಾಮಧೇನು ಎಂಬ ಪವಿತ್ರ ಭಾವನೆಯೊಂದಿಗೆ ಕೃಷಿಕರು ಗೋವುಗಳನ್ನು ಆರೈಕೆ ಮಾಡುವಂತಾಗಲು ಗೋಪೂಜೆಯಲ್ಲಿ ನಾವೆಲ್ಲರೂ ಪಾಲ್ಗೊಳ್ಳೋಣ"** ಎಂದರು.

ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ, ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಆಗಮೋಕ್ತ ವಿಧಿಯಲ್ಲಿ ಪೂಜೆ ಸಲ್ಲಿಸಲಾಯಿತು. ಊರಪರವೂರ ಭಕ್ತರು, ಶ್ರೀ ಪದ್ಮಾವತಿ ಮಹಿಳಾ ಸಮಾಜದ ಶ್ರಾವಕೆಯರು, ಶ್ರೀ ಕುಂದಕುಂದ ಗುರುಕುಲ ವಿದ್ಯಾಪೀಠದ ವಿದ್ಯಾರ್ಥಿಗಳು ಭಕ್ತಿಯಿಂದ ಗೋಮಾತೆಯ ಪೂಜಾ ವಿಧಿಯಲ್ಲಿ ಭಾಗಿಯಾದರು. ಗಜರಾಣಿ ಐಶ್ವರ್ಯ, ಅಶ್ವಗಳಾದ ಮಾನವಿ, ಮಾನಸಿ, ಚೇತಕ್, ಪವನ್ ಶ್ರೀಗಳವರಿಂದ ಶ್ರೀಫಲ ಮಂತ್ರಾಕ್ಷತೆ ಸ್ವೀಕರಿಸಿದವು.



**ಹುಬ್ಬಳ್ಳಿ :** ವಿಶೇಷ ಸಾಧನೆ ಪರಿಗಣಿಸಿ ಹುಬ್ಬಳ್ಳಿಯ ಶ್ರೀ ಮಹಾವೀರ ಕುಂದೂರ ಅವರಿಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಕರ್ನಾಟಕ ರಾಜ್ಯೋತ್ಸವ ನಿಮಿತ್ತ 'ಧೀಮಂತ ಸನ್ಮಾನ' ಪ್ರಶಸ್ತಿಯನ್ನು ಶಾಸಕ ಶ್ರೀ ಮಹೇಶ ಟೆಂಗಿನಕಾಯಿ ಹಾಗೂ ಮೇಯರ್ ಶ್ರೀಮತಿ ಜ್ಯೋತಿ ಪಾಟೀಲ ಅವರು ಪ್ರದಾನ ಮಾಡಿ ಗೌರವಿಸಿದರು.

**ಜ್ಞಾನಂ ಪೂಜ್ಯಂ ತಪೋಹೀನಂ ಜ್ಞಾನಹೀನಂ ತಪೋಹಿತಮ್ ।**
**ಯತ್ತದ್ವಯಂ ಸ ದೇವಃ ಸ್ಯಾದ್ವಿಹೀನೋ ಗಣಪೂರಣಃ ॥**
(ಸಂಗ್ರಹ)

**ಜಿನ-ದನಿ**

ಅರ್ಥ : ಯಾರಲ್ಲಿ ತಪಸ್ಸು ಕಡಿಮೆಯಿದ್ದು, ಜ್ಞಾನವು ಅಧಿಕವಿದ್ದರೆ, ಆತ ಕೂಡ ಪೂಜ್ಯವೇ ಹಾಗೂ ಜ್ಞಾನ ಕಡಿಮೆಯಿದ್ದು, ತಪಸ್ಸು ಕಡಿಮೆಯಿದ್ದಲ್ಲಿ ಆಗಲೂ ಕೂಡ ಪೂಜ್ಯನೇ. ಒಂದು ವೇಳೆ ಜ್ಞಾನ ಮತ್ತು ತಪಸ್ಸುಗಳೆರಡು ಇದ್ದಲ್ಲಿ ಪರಮಪೂಜ್ಯನೆನಿಸಿಕೊಳ್ಳುತ್ತಾನೆ. ಆದರೆ ಜ್ಞಾನ ಮತ್ತು ತಪಸ್ಸುಗಳೆರಡು ಇಲ್ಲವಾದಲ್ಲಿ ಕೇವಲ ಲೆಕ್ಕಕ್ಕೆ ಮಾತ್ರ ಗುರುತಿಸಿಕೊಳ್ಳುವುದು

# ಬರಲಿರುವ ಪರ್ವದಿನಗಳು

ವಿಶ್ವಾವಸುನಾಮ ಸಂವತ್ಸರದ

**ಕಾರ್ತೀಕಮಾಸ ಕೃಷ್ಣಪಕ್ಷ ತ್ರಯೋದಶಿಯಿಂದ ಮಾರ್ಗಶಿರಮಾಸ ಕೃಷ್ಣಪಕ್ಷ ದ್ವಾದಶಿಯವರೆಗೆ**

**ಕಾರ್ತಿಕ ಮಾಸ**

ನ. 18 ಮಂಗಳ-ತ್ರಯೋದಶಿ-ಸ್ವಾತಿ
ನ. 19 ಬುಧ-ಚತುರ್ದಶಿ-ಸ್ವಾತಿ
ನ. 20 ಗುರು-ಅಮವಾಸ್ಯೆ-ವಿಶಾಖ

**ಮಾರ್ಗಶಿರ ಮಾಸ**

ನ. 21 ಶುಕ್ರ-ಪ್ರತಿಪದ-ಅನುರಾಧ
ನ. 22 ಶನಿ-ಬಿದಿಗೆ-ಜ್ಯೇಷ್ಠಾ
ನ. 23 ಭಾನು-ತದಿಗೆ-ಮೂಲ
ನ. 24 ಸೋಮ-ಚತುರ್ಥಿ-ಪೂ.ಷಾಢ
ನ. 25 ಮಂಗಳ-ಪಂಚಮಿ-ಉ.ಷಾಢ
ನ. 26 ಬುಧ-ಷಷ್ಠಿ-ಶ್ರವಣ
ನ. 27 ಗುರು-ಸಪ್ತಮಿ-ಧನಿಷ್ಠಾ
ನ. 28 ಶುಕ್ರ-ಅಷ್ಟಮಿ-ಶತಭಿಷಾ
ನ. 29 ಶನಿ-ನವಮಿ-ಪೂ.ಭಾದ್ರ
ನ. 30 ಭಾನು-ದಶಮಿ-ಉ.ಭಾದ್ರ
ಡಿ. 01 ಸೋಮ-ಏಕಾದಶಿ-ರೇವತಿ
ಡಿ. 02 ಮಂಗಳ-ದ್ವಾದಶಿ-ಅಶ್ವಿನಿ
ಡಿ. 03 ಬುಧ-ತ್ರಯೋದಶಿ-ಭರಣಿ
ಡಿ. 04 ಗುರು-ಚತುರ್ದಶಿ-ಹುಣ್ಣಿಮೆ-ಭರಣಿ
ಡಿ. 05 ಶುಕ್ರ-ಪ್ರತಿಪದ-ರೋಹಿಣಿ
ಡಿ. 06 ಶನಿ-ಬಿದಿಗೆ-ಮೃಗಶಿರಾ
ಡಿ. 07 ಭಾನು-ತದಿಗೆ-ಆರಿದ್ರಾ-ಪುನರ್ವಸು
ಡಿ. 08 ಸೋಮ-ಚತುರ್ಥಿ-ಪುಷ್ಯ
ಡಿ. 09 ಮಂಗಳ-ಪಂಚಮಿ-ಆಶ್ಲೇಷಾ
ಡಿ. 10 ಬುಧ-ಷಷ್ಠಿ-ಮಘ
ಡಿ. 11 ಗುರು-ಸಪ್ತಮಿ-ಪೂರ್ವಾ
ಡಿ. 12 ಶುಕ್ರ-ಅಷ್ಟಮಿ-ಉತ್ತರ
ಡಿ. 13 ಶನಿ-ನವಮಿ-ಉತ್ತರ
ಡಿ. 14 ಭಾನು-ದಶಮಿ-ಹಸ್ತ
ಡಿ. 15 ಸೋಮ-ಏಕಾದಶಿ-ಚಿತ್ತಾ
ಡಿ. 16 ಮಂಗಳ-ದ್ವಾದಶಿ-ಸ್ವಾತಿ

## ಪರಮಪೂಜ್ಯ ಶ್ರೀಗಳವರ ಪಟ್ಟಾಭಿಷೇಕ ವರ್ಧಂತ್ಯೋತ್ಸವ

1ನೇ ಪುಟದಿಂದ

ಶ್ರೀಗಳವರ 14ನೇ ಪಟ್ಟಾಭೀಷೇಕ ವರ್ಧಂತ್ಯೋತ್ಸವ ಸಂದರ್ಭದಲ್ಲಿ ಶ್ರೀಗಳವರು ಅನುಗ್ರಹ ಪ್ರವಚನ ಮಾಡುತ್ತಾ **"ಶ್ರೀಕ್ಷೇತ್ರದ ಅಭಿವೃದ್ಧಿಯೊಂದಿಗೆ ಪ್ರಾಚೀನ ಜಿನಮಂದಿರ, ಸ್ಮಾರಕಗಳ ಸಂರಕ್ಷಣೆ ಹಾಗೂ ಅಧೀನ ಕ್ಷೇತ್ರಗಳಾದ ಕುಂದಾದ್ರಿ, ಶ್ರೀ ವರಂಗ ಜೈನ ಮಠ-ಜಿನಮಂದಿರ, ಹಟ್ಟಿಯಂಗಡಿ ಜಿನಮಂದಿರಗಳ ಜೀರ್ಣೋದ್ಧಾರ ಕಾರ್ಯಗಳನ್ನು ಸದ್ಭಕ್ತರ, ದಾನಿಗಳ ಸಹಯೋಗದಲ್ಲಿ ಸಾಂಗವಾಗಿ ನೆರವೇರಿಸಲಾಗಿದೆ"** ಎನ್ನುತ್ತಾ **"ಲೋಕದಲ್ಲಿ ಅಹಿಂಸಾಭಾವ ಮತ್ತು ಪರಸ್ಪರ ಮೈತ್ರಿ ಸಂಘರ್ಷಗಳನ್ನು ದೂರಮಾಡುವಂತಾಗಲಿ"** ಎನ್ನುತ್ತಾ ಜೈನ ಧರ್ಮದ ಧರ್ಮಸಂದೇಶವು ವಿಶ್ವಮಾನ್ಯವಾದುದೆಂದರು.

ಶ್ರೀನೇಮಿನಾಥ ಸ್ವಾಮಿ, ಶ್ರೀ ಮಹಾವೀರ ಸ್ವಾಮಿ, ಶ್ರೀ ಆದಿನಾಥ ಸ್ವಾಮಿ, ಶ್ರೀಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ, ಶ್ರೀಕ್ಷೇತ್ರಪಾಲ ಹಾಗೂ ಶ್ರೀ ನಾಗಸನ್ನಿಧಿಯಲ್ಲಿ ಜಿನಾಗಮೋಕ್ತ ವಿಧಿಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು.

ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಷೋಡೋಪಚಾರರ ಪೂಜೆಯ ಬಳಿಕ ಶ್ರೀಗಳವರು ಸರ್ವರಿಗೂ ಶ್ರೀಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ಊರ ಪರವೂರ ಭಕ್ತವೃಂದ, ಶ್ರೀ ಕುಂದಕುಂದ ಗುರುಕುಲ ವಿದ್ಯಾಪೀಠದ ವಿದ್ಯಾರ್ಥಿಗಳು, ಶ್ರೀ ಪದ್ಮಾವತಿ ಮಹಿಳಾ ಸಮಾಜ ಶ್ರೀಗಳವರಿಗೆ ಭಕ್ತಿಪೂರ್ವಕ ಶುಭಾಭಿನಂದನೆ ಮಾಡಿದರು. ಪುರೋಹಿತ ಪದ್ಮರಾಜ ಇಂದ್ರರವರು ಸ್ವಸ್ತಿವಾಚನ ಮಾಡಿ ಸಹಪುರೋಹಿತರೊಂದಿಗೆ ಪೂಜಾ ವಿಧಾನ ನೆರವೇರಿಸಿದರು. ಕಾರ್ಯನಿರ್ವಹಣಾಧಿಕಾರಿ ಶ್ರೀ ಪ್ರಕಾಶ ನೇ. ಮಗದುಮ್ಮ, ಆಢಳಿತಾಧಿಕಾರಿ ಸಿ.ಡಿ. ಅಶೋಕ ಕುಮಾರ ಹಾಗೂ ಎಲ್ಲ ಸೇವಾಕಾಂಕ್ಷಿ ವರ್ಗದವರು ಉಪಸ್ಥಿತರಿದ್ದರು.

# ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ-2026

## ಬಿಡುಗಡೆ-ಮಾರಾಟಕ್ಕೆ ಲಭ್ಯ



ಅತಿಶಯ ಶ್ರೀಕ್ಷೇತ್ರ ಹೊಂಬುಜದಿಂದ ಕನ್ನಡ ಭಾಷೆಯಲ್ಲಿ ಪ್ರಕಟಿಸಲ್ಪಡುವ ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ-2026 ಸ್ವಸ್ತಿಶ್ರೀಗಳವರು ಬಿಡುಗಡೆಗೊಳಿಸಿದರು. ಪ್ರತಿಯೊಂದು ದಿನದ ಧಾರ್ಮಿಕ ಮಹತ್ವವನ್ನು ಆಚರಿಸುವುದು ಪ್ರತಿಯೋರ್ವರ ಧರ್ಮ ಮತ್ತು ಕರ್ತವ್ಯ ಎಂದು ಶುಭ ಹಾರೈಸಿದರು. ಪ್ರಕಟಗೊಂಡಿರುವ "ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ" ಶ್ರೀಕ್ಷೇತ್ರದಲ್ಲಿ ಲಭ್ಯವಿದೆ. ದಿನದರ್ಶಿಕೆಯ ಬೆಲೆ 50/- ಅಂಚೆಯ ಮೂಲಕ ಪಡೆಯಲಿಚ್ಛಿಸುವವರು ಅಂಚೆ ವೆಚ್ಚ ಸೇರಿ ರೂ. 80/- ಶ್ರೀಮಠದ ವಿಳಾಸಕ್ಕೆ ಕಳುಹಿಸಿದಲ್ಲಿ ಅಂಚೆ ಮೂಲಕ ಕಳುಹಿಸಲಾಗುವುದು.

## ಶ್ರೀಕ್ಷೇತ್ರ ವರಂಗದಲ್ಲಿ ದೀಪೋತ್ಸವ



**ವರಂಗ :** ಹೊಂಬುಜ ಜೈನ ಮಠದ ಅಧೀನ ಕ್ಷೇತ್ರ ವರಂಗದಲ್ಲಿ ನ. 05ರ ಬುಧವಾರದಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ಮಾರ್ಗದರ್ಶನದಲ್ಲಿ ಅದ್ದೂರಿಯಾಗಿ ನೆರವೇರಿತು



## "ಹೊಲದಲ್ಲಿ ಬೆಳೆದ ಸಮೃದ್ಧ ಭತ್ತದ ಬೆಳೆ ಭೂತಾಯಿಯ ವರಪ್ರಸಾದ"

**ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ**





**ಹೊಂಬುಜ (ಅ.24) :** ಶ್ರೀ ಮಹಾವೀರ ಶಕವರ್ಷ 2552 ವಿಶ್ವಾವಸು ಸಂವತ್ಸರ ಹೊಸ ಭತ್ತದ ಪೈರು ಕಟಾವು ಇಂದು ಅತಿಶಯ ಶೀಕ್ಷೇತ್ರದ ಪುಣ್ಯ ಕೃಷಿ ಭೂಮಿಯಲ್ಲಿ ಶಾಸ್ತ್ರೋಕ್ತವಾಗಿ ಪೂರ್ವ ಪರಂಪರೆಯಂತೆ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ ದಿವ್ಯ ನೇತೃತ್ವ, ಸಾನಿಧ್ಯ ಮತ್ತು ಮಾರ್ಗದರ್ಶನದಲ್ಲಿ ಶ್ರೀಪಾರ್ಶ್ವನಾಥ ಸ್ವಾಮಿ, ಲೋಕವಂದನೀಯ ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಗೆ ಪಲ್ಲಕ್ಕಿಯಲ್ಲಿ ತರಲಾಯಿತು.

ಶ್ರೀ ಸನ್ನಿಧಿಯಲ್ಲಿ ಪೂಜಾ ವಿಧಾನದ ಮೂಲಕ ಹೊಸ ಭತ್ತದ ತೆನೆಯುಳ್ಳ ಪೈರನ್ನು ಶ್ರೀ ಪದ್ಮಾವತಿ ದೇವಿ ಸನ್ನಿಧಿಗೆ ಶ್ರೀಗಳವರು ಭಕ್ತಿಯಿಂದ ಸಮರ್ಪಿಸಿದರು. **"ಪೃಥ್ವಿಯ ಪುಣ್ಯಭೂಮಿಯಲ್ಲಿ ಬೆಳೆದ ಭತ್ತವು ಆಹಾರ ದ್ರವ್ಯವಾಗಿ ಬಳಸುವುದರಿಂದ ಅನ್ನಪ್ರಸಾದ ರೂಪವಾಗಿ ಶರೀರ ಪೋಷಣೆ ಆಗುತ್ತದೆ. ಭಕ್ತರಿಗೆ ನಿತ್ಯನಿರಂತರ ಅಭೀಷ್ಠ ಅನ್ನಪ್ರಸಾದ ಲಭಿಸುತ್ತಿದೆ"** ಎಂದು ಶ್ರೀಗಳವರು ಪ್ರವಚನದಲ್ಲಿ ತಿಳಿಸಿದರು. **"ಕೃಷಿ ಚಟುವಟಿಕೆಯಲ್ಲಿ ಭಾಗಿಯಾದವರಿಗೆ ಮಹಾಮಾತೆ ಇಷ್ಟಾರ್ಥ ಸತ್ಫಲ ನೀಡಲಿ"** ಎಂದು ಹರಸುತ್ತಾ ಊರ ಪರವೂರ ಭಕ್ತರಿಗೆ ಹೊಸತೆನೆ-ಶ್ರೀಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ಶ್ರೀಕ್ಷೇತ್ರದ ಸ್ವಾಮ್ಯದ ಹೊಲದಲ್ಲಿ ಬೆಳೆದ ಸಮೃದ್ಧ ಭತ್ತದ ಬೆಳೆ ಭೂ ತಾಯಿಯ ವರಪ್ರಸಾದ ಎಂದು ಉಲ್ಲೇಖಿಸಿ ಭೂಮಿಯನ್ನು ಸದ್ವಿನಿಯೋಗಗೊಳಿಸಿ, ಆರ್ಥಿಕವಾಗಿ ಸಬಲರಾಗಬೇಕು ಎಂಬ ಸಂದೇಶವಿತ್ತರು. ಪುರೋಹಿತ ಪದ್ಮರಾಜ ಇಂದ್ರ, ಸಹಪುರೋಹಿತರು ಪೂಜಾ ವಿಧಿ ನೆರವೇರಿಸಿದರು.

## ಟ್ರಸ್ಟಿನ 37ನೇ ವಾರ್ಷಿಕೋತ್ಸವ-4ನೇ ಆದರ್ಶ ಜೈನ ಮಹಿಳಾ ರತ್ನ ಪ್ರಶಸ್ತಿ ಪ್ರದಾನ

## 26ನೇ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭ

WWW.HOMBUJAPADMAVATI.ORG







**ಬೆಂಗಳೂರು:** ದಿನಾಂಕ 12-10-2025ರಂದು ಮಧ್ಯಾಹ್ನ 2.30 ಗಂಟೆಗೆ ಇಲ್ಲಿಯ ಕರ್ನಾಟಕ ಜೈನ ಭವನದಲ್ಲಿ ಟ್ರಸ್ಟಿನ 37ನೇ ವಾರ್ಷಿಕೋತ್ಸವ ಮತ್ತು 26ನೇ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭವು ಶ್ರೀ ಧರ್ಮಸ್ಥಳ ಸುರೇಂದ್ರ ಕುಮಾರ್ ಅವರ ಉದ್ಘಾಟನೆಯೊಂದಿಗೆ ನೆರವೇರಿತು. ತುಮಕೂರಿನ ಖ್ಯಾತ ಸಮಾಜ ಸೇವಕಿ ಹಾಗೂ ಸಾಹಿತಿ ಬ್ರಹ್ಮಚಾರಿಣಿ ಜಲಜಾ ಜೈನ ಅವರಿಗೆ ಭಾರತೀಯ ಜೈನ ಮಿಲನ್‌ನ ಕಾರ್ಯಧ್ಯಕ್ಷೆಯಾದ ಶ್ರೀಮತಿ ಅನಿತಾ ಸುರೇಂದ್ರಕುಮಾರ್ ಅವರು 'ಆದರ್ಶ ಜೈನ ಮಹಿಳಾ ರತ್ನ' ಪ್ರಶಸ್ತಿ ಪ್ರದಾನ ಮಾಡಿದರು.

ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 95ಕ್ಕಿಂತ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಕರ್ನಾಟಕ ಉಚ್ಛನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಸನ್ಮಾನ್ಯ ಶ್ರೀ ಅಜಿತ ಜೆ. ಗುಂಜಾಳ್ ಅವರು ಪ್ರತಿಭಾ ಪುರಸ್ಕಾರ ಮಾಡಿದರು. ಸಮಾರಂಭದ ಮುಖ್ಯ ಅತಿಥಿಗಳಾಗಿ ಶ್ರೀ ರಾಜಕೀರ್ತಿಯವರು ಮತ್ತು ಸುಭಾಶ್ ಪಿ. ಜಿನಗೌಡ ಅವರು ಭಾಗವಹಿಸಿದ್ದರು. ಟ್ರಸ್ಟ್‌ನ ಚೇರ್ಮನ್‌ರಾದ ಶ್ರೀ ಎಸ್. ಜಿತೇಂದ್ರ ಕುಮಾರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪಿ.ವೈ. ರಾಜೇಂದ್ರ ಕುಮಾರ್ ಅವರು ವಂದಿಸಿದರು. ಶ್ರೀಮತಿ ಕುಮುದಾ ನಾಗಭೂಷಣ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

## ಶ್ರೀಕ್ಷೇತ್ರ ಹೊಂಬುಜದ ಶಿಖರದ ಕಳಸ ಸ್ಥಾಪನೆ





**ಹೊಂಬುಜ (ನ. 07) :** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಚಂದ್ರಶಾಲೆಯ ಶಿಖರದ ಕಳಸ ಸ್ಥಾಪನೆಯನ್ನು ಆಚಾರ್ಯ ಶ್ರೀ ಗುಲಾಭಭೂಷಣ ಮಹಾರಾಜರ ಹಾಗೂ ಆಚಾರ್ಯ ಶ್ರೀ 108 ಗುಣಭದ್ರನಂದಿ ಮಹಾರಾಜರ ಸಸಂಘಸ್ಥರಾಗಿ ಆರ್ಯಿಕಾ ಮಾತಾಜಿಯವರ ಸಾನಿಧ್ಯ ಹಾಗೂ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾಕರ ಮಹಾಸ್ವಾಮೀಜಿಯವರ ನೇತೃತ್ವದಲ್ಲಿ ಚಂದ್ರಶಾಲೆಯ ಶಿಖರದಲ್ಲಿ ಕಳಸ ಸ್ಥಾಪನೆಯನ್ನು ಮಾಡಲಾಯಿತು.

## ಪಾದಯಾತ್ರೆ



**ಕಾರ್ಕಳ :** ಇಲ್ಲಿಯ ಜೈನ ಸಮಾಜದ ಬಾಂಧವರು ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠಕ್ಕೆ ಪಾದಯಾತ್ರೆಯ ಮೂಲಕ ಆಗಮಿಸಿ ಕ್ಷೇತ್ರದ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀ ಪದ್ಮಾವತಿ ಅಮ್ಮನವರ ದರ್ಶನ ಪಡೆದು ಪರಮಪೂಜ್ಯ ಶ್ರೀಗಳವರಿಂದ ಆಶೀರ್ವಾದ ಪಡೆದರು. 11 ಜನ ಜೈನ ಸಮಾಜ ಬಾಂಧವರು ದೀಪೋತ್ಸವದ ಸಂದರ್ಭದಲ್ಲಿ ಪಾದಯಾತ್ರೆಯ ಮೂಲಕ ಶ್ರೀಕ್ಷೇತ್ರಕ್ಕೆ ಆಗಮಿಸಿದ್ದರು.

# ಶ್ರೀಕ್ಷೇತ್ರ ಹೊಂಬುಜದಲ್ಲಿ ಲಕ್ಷ ದೀಪೋತ್ಸವ ವೈಭವ


ತ್ರಿಕೂಟ ಜಿನಮಂದಿರದಲ್ಲಿ ದೀಪೋತ್ಸವ


ಮಕ್ಕಳ ಬಸದಿಯಲ್ಲಿ ದೀಪೋತ್ಸವ


ಬೋಗಾರ ಬಸದಿಯಲ್ಲಿ ದೀಪೋತ್ಸವ


ಪಂಚಬಸದಿಯಲ್ಲಿ ದೀಪೋತ್ಸವ


WWW.HOMBUJAPADMAVATI.ORG
ನಗರ ಜಿನಾಲಯದಲ್ಲಿ ದೀಪೋತ್ಸವ


ಲಕ್ಷದೀಪೋತ್ಸವದಂದು ಪಲ್ಲಕ್ಕಿ ಉತ್ಸವ







ಗುರುದೇವ GURUDEVA MONTHLY
RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
Licensed to post without prepayment Licence No: SK/WPP/226/2024-26
ವಾರ್ಷಿಕ ಚಂದಾ : ರೂಪ್ಯಾ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪ್ಯಾ 1000-00 ಮಾತ್ರ.
ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬.

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722